**DEPARTMENTAL TESTS – JULY, 2023**

**[Translation from Kannada to Malayalam]**

[Time : 45 Minutes

(Maximum : 100 marks)

1. Translate the following Kannada passage to Malayalam.

ಜಗತ್ತಿನಾದ್ಯಂತ ಚರ್ಚೆ ಮಾಡಲ್ಪಡುವ ಒಂದು ವಿಷಯವಾಗಿದೆ ಮಾಲಿನ್ಯ. ಜನಸಾಮಾನ್ಯರು ಕೂಡಾ ಈ ವಿಷಯದ ಕುರಿತು ಮಾತನಾಡಲು ಆರಂಭಿಸಿರುತ್ತಾರೆ. ಈ ಸಮಸ್ಯೆಯ ಗಂಭೀರತೆ ಲೋಕದ ಜನರಲ್ಲಿ ಒಂದು ಎಚ್ಚರಿಕೆಯನ್ನು ಮೂಡಿಸಿದೆ. ಜಲ ಮಲಿನೀಕರಣಕ್ಕೆ ಒಂದು ಯುದ್ಧದ ಅವಶ್ಯಕತೆ ಇಲ್ಲ. ಅದು ನಿರಂತರವಾಗಿ ಮುಂದುವರಿಯುತ್ತಿದೆ. ಕಾರ್ಖಾನೆಗಳಿಂದ ಹೊರಬರುವ ವಿಷಯುಕ್ತವಾದ ಮಲಿನ ಜಲ ನದಿಗಳಿಗೆ ಹರಿಯುತ್ತಿದೆ. ನಮ್ಮ ನೀರಿನ ಮೂಲಗಳು, ನದಿಗಳು ಈಗಾಗಲೇ ಮಲಿನೀಕರಣವಾಗಿದೆ. ಕಾರ್ಖಾನೆಗಳಿಂದ, ಮೋಟಾರು ವಾಹನಗಳಿಂದ ಹೊರಬರುವ ವಿಷಯುಕ್ತವಾದ ಗಾಳಿಯಿಂದಾಗಿ ಪ್ರಾಣವಾಯು ಕೂಡಾ ಮಲಿನವಾಗಿದೆ. ಇದರಿಂದಾಗಿ ಶ್ವಾಸಕೋಶ ಸಂಬಂಧಿಸಿದ ರೋಗಗಳು ಹೆಚ್ಚಾಗುತ್ತಿವೆ. ವಿವಿಧ ಕೆಲಸಗಳಿಂದಾಗಿ ಉಂಟಾಗುವ ಧೂಳಿನಿಂದಾಗಿ ವಾಯುಮಂಡಲ ಮಲಿನವಾಗುತ್ತಿವೆ. ಇವೆಲ್ಲ ತೀವ್ರ ಆರೋಗ್ಯ ಸಮಸ್ಯೆಗಳನ್ನು ಉಂಟುಮಾಡುತ್ತಿವೆ. ಶಬ್ದ ಮಲಿನೀಕರಣ ಮತ್ತೊಂದು ವಿಷಯ ವಿಮಾನಗಳಿಂದ, ಧ್ವನಿವರ್ಧಕಗಳು ಸೃಷ್ಟಿಸುವ ಕರ್ಕಶ ಶಬ್ದಗಳಿಂದ, ವಾಹನಗಳ ಕಿವಿಗಡಚ್ಚಿಕ್ಕುವ ಹೋರ್ನ್‌ಗಳಿಂದ ನಮ್ಮ ವಾತಾವರಣ ಮಲಿನವಾಗುತ್ತಿದೆ. ಶಬ್ದ ಮಲಿನೀಕರಣ ನಮ್ಮ ಆಲಿಸುವ ಶಕ್ತಿಯನ್ನು ಕುಂಠಿತಗೊಳಿಸುತ್ತದೆ. ತೀವ್ರವಾದ ಶಬ್ದತರಂಗಗಳು ಗರ್ಭಸ್ಥ ಶಿಶುವಿನ ಭವಿಷ್ಯವನ್ನೇ ಅಪಾಯಕ್ಕೊಡ್ಡುತ್ತದೆ. ಜಲ, ವಾಯುಮಾಲಿನ್ಯವಾಗುವಂತೆಯೇ ನಮ್ಮ ಮಣ್ಣೂ ಮಲಿನವಾಗುತ್ತಿದೆ. ರಾಸಾಯನಿಕ ಗೊಬ್ಬರಗಳು, ಕೀಟನಾಶಕಗಳು ಇದಕ್ಕೆ ಕಾರಣವಾಗುತ್ತಿವೆ. ವಾಯುಮಂಡಲದಲ್ಲಿ ಕಾರ್ಬನ್ ಡೈ ಆಕ್ಸೈಡ್‌ನ ಕ್ರಮಾಗತವಾದ ಹೆಚ್ಚಳದಿಂದ ವಾತಾವರಣದ ಉಷ್ಣಾಂಶವು ದಿನನಿತ್ಯ ಹೆಚ್ಚಾಗುವುದಕ್ಕೆ ಕಾರಣವಾಗುತ್ತಿದೆ. ಪ್ರಕೃತಿಗೆ ವಿರುದ್ಧವಾದ ಕಟ್ಟಡಗಳ ನಿರ್ಮಾಣವು ಈ ತಾಪಮಾನದ ಹೆಚ್ಚಳಕ್ಕೆ ಸಹಕಾರಿಯಾಗಿದೆ. ಧ್ರುವ ಪ್ರದೇಶಗಳಲ್ಲಿ ಮಂಜುಗಡ್ಡೆಗಳು ಕರಗುವುದು ಈ ತಾಪಮಾನ ಹೆಚ್ಚಳದ ಫಲವಾಗಿದೆ.